Prajavani 20/2/2014

## ಸೌರವಿದ್ಯುತ್ ಶಕ್ತಿ ಖರೀದಿಗೆ ಬೆಸ್ಕಾಂ ಒಪ್ಪಂದ

**ಪ್ರಜಾವಾಣಿ ವಾರ್ತೆ**

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪೆನಿಯು ಐದು ಮೆಗಾವಾಟ್ ಸೌರ ವಿದ್ಯುತ್ ಶಕ್ತಿ ಖರೀದಿಗೆ ಜರ್ಮನಿಯ ಸೊಲಿಯಾ ಎಜಿ ಹಾಗೂ ಪಿನ್ ಪಾಯಿಂಟ್ ಎನರ್ಜಿ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ನಗರದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ವಿದ್ಯುತ್ ಖರೀದಿ ವಿಭಾಗದ ಪ್ರಧಾನ ವ್ಯವಸ್ಥಾಪಕ ಸಿ.ಆರ್.ವಿಜಯ್ ದೇವ್ ಅವರು ಒಪ್ಪಂದಕ್ಕೆ ಸಹಿ ಹಾಕಿದರು.

ಪಿನ್‌ಪಾಯಿಂಟ್ ನಿರ್ದೇಶಕ ಕಿಶೋರ್ ಪಿನ್‌ಪಟ್ಟೆ ಮಾತನಾಡಿ, 'ರಾಜ್ಯ ಸರ್ಕಾರ ಉತ್ತಮ ರೀತಿಯಲ್ಲಿ ಟೆಂಡರ್ ಪ್ರಕ್ರಿಯೆ ನಡೆಸಿದೆ. ರಾಜ್ಯದಲ್ಲಿ ಗ್ರಿಡ್ ನೆರವಿನಿಂದ ಸೌರಶಕ್ತಿ ಪೂರೈಸುವ ಒಪ್ಪಂದಕ್ಕೆ ಸಹಿ ಹಾಕಿದ ಮೊದಲ ಜರ್ಮನ್ ಕಂಪೆನಿ ನಮ್ಮದು' ಎಂದರು.

ಸೊಲಿಯಾ ಎಜಿ ಸಂಸ್ಥೆಯ ನಿರ್ದೇಶಕ ಜಾರ್ಜ್ ಸ್ಪೆನರ್ ಮಾತನಾಡಿ, 'ಭಾರತದಲ್ಲಿ ಸೌರಶಕ್ತಿ ಮಾರುಕಟ್ಟೆಯ ಸವಾಲುಗಳ ಬಗ್ಗೆ ಅರಿವಿದೆ. ಈ ಒಪ್ಪಂದವು 25 ವರ್ಷಗಳ ಕಾಲ ಚಾಲ್ತಿಯಲ್ಲಿ ಇರಲಿದೆ' ಎಂದರು.

UDAYA VANI 20/2/2014

## ಹೊಸಕೋಟೆ ಸುತ್ತ ನಾಳೆ ವಿದ್ಯುತ್ ವ್ಯತ್ಯಯ

**ಬೆಂಗಳೂರು:** ತಾಂತ್ರಿಕ ಕಾರಣಗಳಿಂದ ಹೊಸಕೋಟೆ ತಾಲೂಕಿನ ವಿವಿಧ ಪ್ರದೇಶಗಳಲ್ಲಿ ಫೆ. 22ರ ಶುಕ್ರವಾರ ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ಮಾಲೂರು 220 ಕೆ.ವಿ. ವಿತರಣಾ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಇರುವುದರಿಂದ ಹೊಸಕೋಟೆ ಪಟ್ಟಣ, ಆವಲಹಳ್ಳಿ ಕೈಗಾರಿಕಾ



ಪ್ರದೇಶ, ಬೂದಿಗೆರೆ ರಸ್ತೆ, ಮಂಡೂರು, ಹಳೇ ಮದ್ರಾಸ್ ರಸ್ತೆ, ಆಲಪ್ಪನಹಳ್ಳಿ, ಲಕ್ಕೊಂಡಹಳ್ಳಿ, ಕುಂದಲಹಳ್ಳಿ, ಜ್ಯೋತಿಪುರ, ಡಿಆರ್‌ಡಿಓ, ಬಿಪಿಎಲ್, ಸಿಪ್ಲಾ, ಜಡಿಗೇನಹಳ್ಳಿ, ಚಿಕ್ಕತಗ್ಗಲಿ, ದೊಡ್ಡತಗ್ಗಲಿ, ವಾಗಟ, ಕಟ್ಟಿಗೇನಹಳ್ಳಿ, ಹರಳೂರು ಮತ್ತು ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಬೆಸ್ಕಾಂ ಪ್ರಕಟಣೆ ಕೋರಿದೆ.

Udayvani 20/2/2014

## ವಿದ್ಯುತ್ ಸ್ಪರ್ಶ: ಕಟ್ಟಡದಿಂದ ಬಿದ್ದು ಕಾರ್ಮಿಕ ಸಾವು

**ಬೆಂಗಳೂರು:** ಆಕಸ್ಮಿಕವಾಗಿ ವಿದ್ಯುತ್ ಪ್ರವಹಿಸಿದ್ದರಿಂದ ನಿರ್ಮಾಣ ಹಂತದ ಕಟ್ಟಡದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕನೊಬ್ಬ ಆಯತಪ್ಪಿ ಕೆಳಬಿದ್ದು ಮೃತಪಟ್ಟಿರುವ ಘಟನೆ ಮಡಿವಾಳ ಪೊಲೀಸ್ ಠಾಣಾ ವ್ಯಾಪ್ತಿಯ ಮಾರುತಿನಗರದಲ್ಲಿ ಬುಧವಾರ ನಡೆದಿದೆ. ಬೇಗೂರು ನಿವಾಸಿ ರಾಜಶೇಖರರೆಡ್ಡಿ (22) ಮೃತ ಕಾರ್ಮಿಕ. ಇಲ್ಲಿನ ಇವಾನ್ ಪಾಷಾ ಎಂಬುವರಿಗೆ ಸೇರಿದ ಮನೆ ಕಟ್ಟಡದಲ್ಲಿ ರಾಜಶೇಖರರೆಡ್ಡಿ ಕೆಲಸ ಮಾಡುವಾಗ ಈ ಅವಘಡ ಸಂಭವಿಸಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಮೃತ ರಾಜಶೇಖರರೆಡ್ಡಿ ಮೂಲತಃ ಆಂಧ್ರಪ್ರದೇಶದವರಾಗಿದ್ದು ಕೆಲ ದಿನಗಳ ಹಿಂದಷ್ಟೆ ಕೂಲಿ ಅರಸಿ ನಗರಕ್ಕೆ ವಲಸೆ ಬಂದಿದ್ದರು. ಮಾರುತಿ ನಗರದಲ್ಲಿ ಪಾಷಾ ಅವರಿಗೆ ಸೇರಿದ ಮನೆ ಕಟ್ಟಡದಲ್ಲಿ ರೆಡ್ಡಿ ಕೆಲಸ ಮಾಡುತ್ತಿದ್ದರು. ಬುಧವಾರ ಬೆಳಗ್ಗೆ ಸೆಂಟ್ರಿಂಗ್ ಕೆಲಸ ಮಾಡುವಾಗ ಅವರು, ಕಬ್ಬಿಣದ ಸರಳುಗಳನ್ನು ಮೊದಲ ಮಹಡಿಯಲ್ಲಿ ಜೋಡಿಸುತ್ತಿದ್ದರು. ಆ ವೇಳೆ ಕಬ್ಬಿಣದ ಸರಳಿನ ತುದಿ ಕಟ್ಟಡ ಸನಿಹದಲ್ಲೇ ಇದ್ದ ಟ್ರಾನ್ಸ್‌ಫಾರ್ಮರ್‌ಗೆ ತಾಕಿದೆ. ಕೂಡಲೇ ವಿದ್ಯುತ್ ಪ್ರವಹಿಸಿದ ಪರಿಣಾಮ ರೆಡ್ಡಿ ಆಯತಪ್ಪಿ ಕೆಳಗೆ ಬಿದ್ದಿದ್ದಾರೆ. ಗಂಭೀರವಾಗಿ ಗಾಯಗೊಂಡು ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ದುರಂತ ಸಂಬಂಧ ಕಟ್ಟಡದ ಗುತ್ತಿಗೆದಾರ ಅನಿಲ ಚಕ್ರವರ್ತಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಮಡಿವಾಳ ಠಾಣೆ ಪೊಲೀಸರು ಮಾಹಿತಿ ನೀಡಿದ್ದಾರೆ.

ವೃತ್ತಪಾಲ...

ಸಂಯುಕ್ತ ಕರ್ನಾಟಕ 20/2/14

## 21ಕ್ಕೆ ವಿದ್ಯುತ್ ವ್ಯತ್ಯಯ

**ರಾಮನಗರ, ಫೆ.19:** ಎಫ್–6 ಬಿಡದಿ ಫೀಡರ್ ವಿದ್ಯುತ್ ಮಾರ್ಗ ವ್ಯಾಪ್ತಿಗೆ ಒಳಪಡುವ ಬಿಡದಿ, ಕೇತುಗಾನಹಳ್ಳಿ, ವಾಜರಹಳ್ಳಿ ಮತ್ತು ಬನ್ನಿಕುಪ್ಪೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ.21 ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಹಾಲಿ ಇರುವ ವಿದ್ಯುತ್ ಮಾರ್ಗಗಳಿಗೆ ಎ.ಬಿ.ಕೇಬಲ್ ಅಳವಡಿಸುವ ಕಾಮಗಾರಿ, ವಿದ್ಯುತ್ ಪರಿವರ್ತಕಗಳಿಗೆ ಮಾಪಕ ಅಳವಡಿಸುವ ಕಾಮಗಾರಿ ನಡೆಯುವ ಪ್ರಯುಕ್ತ ವಿದ್ಯುತ್ ಸರಬರಾಜು ಇರುವುದಿಲ್ಲ. ಸಾರ್ವಜನಿಕರು ಸಹಕರಿಸಬೇಕೆಂದು ಬೆಸ್ಕಾಂನ ಬಿಡದಿ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

**ಅಪರಿಚಿತ ಶವ ಪತ್ತೆ**

Prajavani 20/02/2014

## ವಿದ್ಯುತ್ ಪ್ರವಹಿಸಿ ಕಾರ್ಮಿಕ ಸಾವು

ಬೆಂಗಳೂರು: ನಿರ್ಮಾಣ ಹಂತದ ಕಟ್ಟಡದಲ್ಲಿ ಕೆಲಸ ಮಾಡುವಾಗ ವಿದ್ಯುತ್ ಪ್ರವಹಿಸಿ ರಾಜಶೇಖರ್ ರೆಡ್ಡಿ (22) ಎಂಬ ಕಾರ್ಮಿಕ ಸಾವನ್ನಪ್ಪಿರುವ ಘಟನೆ ಮಡಿವಾಳ ಸಮೀಪದ ಮಾರುತಿನಗರದಲ್ಲಿ ಬುಧವಾರ ಬೆಳಿಗ್ಗೆ ನಡೆದಿದೆ.

ಬುಧವಾರ ಬೆಳಿಗ್ಗೆ 9 ಗಂಟೆ ಸುಮಾರಿಗೆ ಕಟ್ಟಡದ ಮೊದಲ ಮಹಡಿಯಲ್ಲಿ ಕೆಲಸ ಮಾಡುತ್ತಿದ್ದ ರೆಡ್ಡಿ, ಕಟ್ಟಡಕ್ಕೆ ಕಬ್ಬಿಣದ ಸರಳುಗಳನ್ನು ಹೊಂದಿಸುತ್ತಿದ್ದರು. ಆಗ ಸರಳಿನ ಒಂದು ತುದಿ ಕಟ್ಟಡದ ಪಕ್ಕದಲ್ಲೇ ಇದ್ದ ಟ್ರಾನ್ಸ್‌ಫಾರ್ಮರ್‌ಗೆ ತಾಗಿದೆ. ಆಗ ವಿದ್ಯುತ್ ಪ್ರವಹಿಸಿದ್ದರಿಂದ ನಿಯಂತ್ರಣ ಕಳೆದುಕೊಂಡ ರೆಡ್ಡಿ, ಕಟ್ಟಡದಿಂದ ಕೆಳಗೆ ಬಿದ್ದು ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

**ಅಪಘಾತ: ಯುವಕ ಸಾವು:** ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಮೀಪದ ಸರ್ವಿಸ್ ರಸ್ತೆಯಲ್ಲಿ ಮಂಗಳವಾರ ರಾತ್ರಿ ಟೆಂಪೊಗಳ ನಡುವೆ ಸಂಭವಿಸಿದ ಅಪಘಾತದಲ್ಲಿ ಕೋಲಾರದ ನರಸಿಂಹಮೂರ್ತಿ (22) ಎಂಬುವರು ಸಾವನ್ನಪ್ಪಿದ್ದಾರೆ. ರಾತ್ರಿ 1 ಗಂಟೆ ಸುಮಾರಿಗೆ ಟೆಂಪೊದಲ್ಲಿ ಕೊರಿಯರ್‌ಗಳನ್ನು ತುಂಬಿಕೊಂಡು ವಿಮಾನ ನಿಲ್ದಾಣದ ಕಡೆಗೆ ಹೋಗುತ್ತಿದ್ದಾಗ ಈ ದುರ್ಘಟನೆ ನಡೆದಿದೆ ಎನ್ನಲಾಗಿದೆ.

20/2/14

## ವಿದ್ಯುತ್ ಅವಘಡ: ಕಾರ್ಮಿಕ ಸಾವು

**ಬೆಂಗಳೂರು:** ನಿರ್ಮಾಣ ಹಂತದ ಕಟ್ಟಡದ ಮೊದಲ ಮಹಡಿಗೆ ಕಾಂಕ್ರಿಟ್ ಹಾಕಲು ಕಬ್ಬಿಣದ ಸರಳು ಹೊಂದಿಸುತಿದ್ದ ವೇಳೆ, ಕಟ್ಟಡದ ಪಕ್ಕದಲ್ಲೇ ಇದ್ದ ಟ್ರಾನ್ಸ್‌ಫಾರ್ಮರ್‌ನ ತಂತಿಗೆ ಕಬ್ಬಿಣದ ಸರಳು ತಾಗಿದ್ದರಿಂದ ವಿದ್ಯುತ್ ಹರಿದು ಕಾರ್ಮಿಕನೊಬ್ಬ ಮೃತಪಟ್ಟಿದ್ದಾನೆ.

ಆಂಧ್ರಪ್ರದೇಶ ಮೂಲದ ರಾಜಶೇಖರ್ ರೆಡ್ಡಿ(22) ಮೃತಪಟ್ಟ ಕಾರ್ಮಿಕ. ಮಡಿವಾಳ, ಮಾರುತಿ ನಗರ 5ನೇ ಕ್ರಾಸ್, ಅಯ್ಯಪ್ಪ ದೇವಾಲಯದ ಹಿಂಭಾಗದ ಕಟ್ಟಡದಲ್ಲಿ ಬುಧವಾರ ಬೆಳಗ್ಗೆ ಒಂಬತ್ತು ಗಂಟೆ ಸುಮಾರಿಗೆ ಈ ದುರಂತ ನಡೆದಿದೆ. ಮೂರು ತಿಂಗಳ ಹಿಂದೆ ನಗರಕ್ಕೆ ಬಂದಿದ್ದ ರೆಡ್ಡಿ, ಬೇಗೂರಿನಲ್ಲಿ ನೆಲೆಸಿದ್ದ. "ಐವಾನ್ ಷಾ ಎಂಬುವವರು ಮಾರುತಿ ನಗರ 5ನೇ ಕ್ರಾಸ್‌ನಲ್ಲಿ ಮನೆ ನಿರ್ಮಾಣ ಮಾಡುತ್ತಿದ್ದು ರಾಜಶೇಖರ್ ರೆಡ್ಡಿ ಅಲ್ಲಿ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದರು.

Vijay Karnataka

ಸಂಯುಕ್ತ ಕರ್ನಾಟಕ 20/2/2014

## ವಿದ್ಯುತ್ ಸ್ಪರ್ಷ ಕಾರ್ಮಿಕನ ಸಾವು

**ಬೆಂಗಳೂರು, ಫೆ. 19:** ನಿರ್ಮಾಣ ಹಂತದ ಮನೆಯ ಮೊದಲ ಮಹಡಿಗೆ ಕಾಂಕ್ರಿಟ್ ಹಾಕಲು ಕಂಬಿಕಟ್ಟುತ್ತಿದ್ದಾಗ ಸೆಂಟ್ರಿಂಗ್ ಸರಿಪಡಿಸಲು ಸುತ್ತಿಗೆಯಿಂದ ಹೊಡೆಯಲು ಹೋಗಿದ್ದ ಕಾರ್ಮಿಕನಿಗೆ ಪಕ್ಕದಲ್ಲಿದ್ದ ಟ್ರಾನ್ಸ್‌ಫಾರ್ಮರ್ ವಿದ್ಯುತ್ ಹರಿಯುತ್ತಿದ್ದ ವೈರ್ ತಗುಲಿ ಆತ ಸ್ಥಳದಲ್ಲಿಯೇ ಮೃತಪಟ್ಟಘಟನೆಮಡಿವಾಳದಮಾರುತಿನಗರದಲ್ಲಿನಡೆದಿದೆ.ಆಂಧ್ರಪ್ರದೇಶ ಮೂಲದ ಬೇಗೂರು ನಿವಾಸಿ ರಾಜಶೇಖರ ರೆಡ್ಡಿ(22) ಮೃತಪಟ್ಟ ವ್ಯಕ್ತಿ.

ಮುಂಜಾನೆ 9 ರ ಸುಮಾರಿನಲ್ಲಿ ಮಾರುತಿ ನಗರದ ಅಯ್ಯಪ್ಪ ದೇವಾಲಯದ ಹಿಂದೆ ನಿರ್ಮಿಸುತ್ತಿದ್ದ ಮನೆಯ ಮೊದಲ ಮಹಡಿಗೆ ಕಾಂಕ್ರಿಟ್ ಹಾಕಲು ಸುಮಾರು 9 ಜನರ ಜೊತೆ ಕಂಬಿ ಕಟ್ಟುತ್ತಿದ್ದರು. ನಂತರ ಕಾಂಕ್ರಿಟ್ ಹಕಲು ಹೊರಭಾಗದಲ್ಲಿ ಸೆಂಟ್ರಿಂಗ್ ಸರಿಪಡಿಸಲು ಸುತ್ತಿಗೆಯಿಂದ ಹೊಡೆಯಲು ಹೋದಾಗ ಪಕ್ಕದಲ್ಲಿ ಇದ್ದ ಟ್ರಾನ್ಸ್‌ಫಾರ್ಮರ್‌ನಿಂದ ವಿದ್ಯುತ್ ಹರಿಯುತ್ತಿದ್ದ ವೈರು ತಗುಲಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ಮನೆಯ ನಿರ್ಮಾಣದ ಗುತ್ತಿಗೆದಾರ ಅನಿಲ್ ಚಕ್ರವರ್ತಿ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಮಡಿವಾಳ ಠಾಣೆ ಪೊಲೀಸರು ತನಿಖೆ ನಡೆಸಿದ್ದಾರೆ.

**ಕೊಲೆ ಆರೋಪಿಗಳ ಬಂಧನ**

Vijayavani 20/02/2014 Pg no: 02

# ಕರೆಂಟ್ ಶಾಕ್: ಕಾರ್ಮಿಕ ಸಾವು

## ■ ಕಟ್ಟಡ ಸೆಂಟ್ರಿಂಗ್ ಕಾಮಗಾರಿ ವೇಳೆ ಟಿ.ಸಿ.ಗೆ ಸರಳು ತಾಗಿ ಅವಘಡ

**ಬೆಂಗಳೂರು:** ಮಡಿವಾಳ ಬಳಿಯ ಮಾರುತಿನಗರದ ನಿರ್ಮಾಣ ಹಂತದ ಕಟ್ಟಡದಲ್ಲಿ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದ ಬಾರ್‌ಬೆಂಡರ್, ವಿದ್ಯುತ್ ಶಾಕ್ ತಗುಲಿ ಮೃತಪಟ್ಟಿದ್ದಾನೆ.

ಬೇಗೂರಿನಲ್ಲಿ ವಾಸಿಸುತ್ತಿದ್ದ ರಾಜಶೇಖರ್ ರೆಡ್ಡಿ(22) ಮೃತ ಯುವಕ. ಆಂಧ್ರಪ್ರದೇಶ ಮೂಲದ ರೆಡ್ಡಿ, 3 ತಿಂಗಳ ಹಿಂದೆ ನಗರಕ್ಕೆ ಬಂದು ಬೇಗೂರಿನಲ್ಲಿ ವಾಸವಾಗಿದ್ದ. ಮಾರುತಿನಗರದ ಅಯ್ಯಪ್ಪ ದೇವಸ್ಥಾನದ ಹಿಂಭಾಗದಲ್ಲಿ ಇವಾನ್ ಷಾ ಎಂಬುವರು ಮನೆ ನಿರ್ಮಿಸುತ್ತಿದ್ದು, ಈ ಕಟ್ಟಡದಲ್ಲಿ ರೆಡ್ಡಿ ಕೆಲದಿನಗಳಿಂದ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದ.

ಬುಧವಾರ ಬೆಳಗ್ಗೆ 9 ಗಂಟೆಯಲ್ಲಿ ಕಟ್ಟಡದ ಮೊದಲ ಮಹಡಿಯಲ್ಲಿ ಕೆಲಸ ಮಾಡುತ್ತಿದ್ದ ರೆಡ್ಡಿ, ಸೆಂಟ್ರಿಂಗ್‌ಗೆ ಕಬ್ಬಿಣದ ಸರಳುಗಳನ್ನು ಜೋಡಿಸುತ್ತಿದ್ದ. ಈ ಸಂದರ್ಭದಲ್ಲಿ ಸರಳಿನ ಒಂದು ತುದಿ ಕಟ್ಟಡದ ಪಕ್ಕದಲ್ಲೇ ಇದ್ದ ಟ್ರಾನ್ಸ್‌ಫಾರ್ಮರ್‌ಗೆ ತಾಗಿ ರೆಡ್ಡಿ ದೇಹಕ್ಕೆ ವಿದ್ಯುತ್ ಪ್ರವಹಿಸಿದ್ದು ಆತ ಸ್ಥಳದಲ್ಲಿಯೇ ಸುಟ್ಟು ಕರಕಲಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಸಂಬಂಧ ಕಟ್ಟಡ ಗುತ್ತಿಗೆದಾರ ಅನಿಲ್ ಚಕ್ರವರ್ತಿ ವಿರುದ್ಧ ನಿರ್ಲಕ್ಷ್ಯ ಆರೋಪದಡಿ ಪ್ರಕರಣ ದಾಖಲಿಸಿ ಕಾನೂನು ಕ್ರಮ ತೆಗೆದುಕೊಂಡಿರುವುದಾಗಿ ಮಡಿವಾಳ ಪೊಲೀಸರು ಮಾಹಿತಿ ನೀಡಿದ್ದಾರೆ.

**ಚರಂಡಿಯಲ್ಲಿ ಶವ ಪತ್ತೆ:** ಚಾಮರಾಜಪೇಟೆ ಹತ್ತಿರದ ಬೃಂದಾವನ ನಗರದಲ್ಲಿರುವ ಚರಂಡಿಯಲ್ಲಿ ಬುಧವಾರ ಸುಮಾರು 40 ವರ್ಷದ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದೆ.

ಬೆಳಗ್ಗೆ 9ಗಂಟೆಗೆ ಚರಂಡಿಯಲ್ಲಿ ಶವ ಕಂಡ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದಾರೆ. ಶವವನ್ನು ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಮೃತ ವ್ಯಕ್ತಿ ಹಲವು ದಿನಗಳಿಂದ ಬೃಂದಾವನ ನಗರದಲ್ಲಿ ಓಡಾಡುತ್ತಿದ್ದ. ಮಾನಸಿಕ ಅಸ್ವಸ್ಥನಂತೆ ಕಾಣುತ್ತಿದ್ದ ಆತ, ಫುಟ್‌ಪಾತ್‌ನಲ್ಲಿ ಮಲಗುತ್ತಿದ್ದ. ರಾತ್ರಿ ಆತ ಆಯತಪ್ಪಿ ಮೋರಿಗೆ ಬಿದ್ದಿರಬಹುದೆಂದು ಚಾಮರಾಜಪೇಟೆ ಪೊಲೀಸರು ತಿಳಿಸಿದ್ದಾರೆ.

# ಕಲ್ಲಿನಿಂದ ಜಜ್ಜಿ ಸ್ನೇಹಿತನ ಹತ್ಯೆ

**ಬೆಂಗಳೂರು:** ಮೈಕೋ ಲೇಔಟ್ ಸಮೀಪದ ಬಿಸ್ಮಿಲ್ಲಾನಗರದಲ್ಲಿ ಮದ್ಯದ ಅಮಲಿನಲ್ಲಿ ಸ್ನೇಹಿತರ ನಡುವಿನ ಜಗಳ ಒಬ್ಬನ ಕೊಲೆಯಲ್ಲಿ ಅಂತ್ಯವಾಗಿದೆ.

ಬಿಸ್ಮಿಲ್ಲಾನಗರದ ನಿವಾಸಿ ಮುಬಾರಕ್(25) ಹತ್ಯೆಯಾದ ಯುವಕ.



ಮುಬಾರಕ್

ಸ್ನೇಹಿತನ ಪ್ರಾಣರಕ್ಷಣೆಗೆ ಧಾವಿಸಿದ ಸೈಫುಲ್ಲಾ ರೆಹಮಾನ್ ಎಂಬಾತನ ಮೇಲೂ ಹಲ್ಲೆ ನಡೆಸಲಾಗಿದೆ. ಆರೋಪಿ ಇಮ್ರಾನ್ ತಲೆಮರೆಸಿಕೊಂಡಿದ್ದು, ಆತನಿಗಾಗಿ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮುಬಾರಕ್ ಬಿಸ್ಮಿಲ್ಲಾನಗರದಲ್ಲಿ ಪಂಕ್ಚರ್ ಅಂಗಡಿ ನಡೆಸುತ್ತಿದ್ದ. ಆರೋಪಿ ಇಮ್ರಾನ್ ಹಳೆ ವಾಹನಗಳನ್ನು ಮಾರಾಟ ಮಾಡುತ್ತಿದ್ದ. 2 ದಿನಗಳ ಹಿಂದೆ ವಾಹನ ಖರೀದಿ ವಿಚಾರವಾಗಿ ಇವರಿಬ್ಬರ ನಡುವೆ ಜಗಳವಾಗಿದ್ದು, ಸ್ನೇಹಿತರ ಮಧ್ಯಪ್ರವೇಶ ದಿಂದ ಪ್ರಕರಣ ತಣ್ಣಗಾಗಿತ್ತು.

- ■ ಹಳೆ ಜಗಳ ಪ್ರಸ್ತಾಪಿಸಿ ತಲೆ ಮೇಲೆ ಕಲ್ಲು ಎತ್ತಿಹಾಕಿದ ಹಂತಕ
- ■ ತಡೆಯಲು ಬಂದ ಸ್ನೇಹಿತನ ಮೇಲೂ ಕಲ್ಲಿನಿಂದ ಹಲ್ಲೆ

**ಮದ್ಯದ ಪಾರ್ಟಿ:** ಆದರೆ ಜಿದ್ದು ಸಾಧಿಸಿದ ಇಮ್ರಾನ್ ಮಂಗಳವಾರ ರಾತ್ರಿ ಮುಬಾರಕ್‌ನ ಮೊಬೈಲ್‌ಗೆ ಕರೆ ಮಾಡಿ ಮದ್ಯದ ಪಾರ್ಟಿಗೆ ಬರುವಂತೆ ಕರೆದಿದ್ದ. ತಡರಾತ್ರಿ ನಿರ್ಜನ ಪ್ರದೇಶದಲ್ಲಿ ಐವರು ಸ್ನೇಹಿತರು ಮದ್ಯ ಸೇವಿಸಿದ್ದಾರೆ. ನಂತರ ಇಮ್ರಾನ್ ಊಟ ತರಲು ಕೆಲ ಗೆಳೆಯರನ್ನು ಹೋಟೆಲ್‌ಗೆ ಕಳುಹಿಸಿ ನಂತರ ಹಳೇ ಜಗಳದ ವಿಚಾರ ಪ್ರಸ್ತಾಪಿಸಿ ಮುಬಾರಕ್ ಜತೆ ಜಗಳ ಆರಂಭಿಸಿದ್ದ. ಈ ವೇಳೆ ಪರಸ್ಪರ ಮಾತಿನ ಚಕಮಕಿ ನಡೆದು ಮುಬಾರಕ್‌ನ ತಲೆ ಮೇಲೆ ಇಮ್ರಾನ್ ಕಲ್ಲು ಎತ್ತಿಹಾಕಿ ಹತ್ಯೆ ಮಾಡಿದ್ದಾನೆ. ತೀವ್ರವಾಗಿ ಗಾಯಗೊಂಡು ಒದ್ದಾಡುತ್ತಿದ್ದ ಮುಬಾರಕ್‌ನನ್ನು ಆಸ್ಪತ್ರೆಗೆ ಸಾಗಿಸಲು ಮುಂದಾದ ಸ್ನೇಹಿತ ಸೈಫುಲ್ಲಾನ ಮೇಲೂ ಕಲ್ಲು ಹಾಕಿ ಗಾಯಗೊಳಿಸಿ ಪರಾರಿಯಾಗಿದ್ದಾನೆ. ಹತ್ಯೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಮೈಕೋಲೇಔಟ್ ಪೊಲೀಸರು ತಿಳಿಸಿದ್ದಾರೆ.

20/2/14

# ರಾತ್ರಿ ಕರೆಂಟ್ ರೈತರಿಗೆ ಅಪಾಯ

**ವಿಧಾನಸಭೆ:** ಕೃಷಿ ಪಂಪ್‌ಸೆಟ್‌ಗಳಿಗೆ ರಾತ್ರಿ ವೇಳೆ ವಿದ್ಯುತ್ ಪೂರೈಕೆ ಮಾಡುತ್ತಿರುವುದರಿಂದ ಕಾಡು ಪ್ರಾಣಿಗಳ ದಾಳಿಯಿಂದ ರೈತರು ಸಾಯುವ ಪರಿಸ್ಥಿತಿ ಒದಗಿದೆ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಬುಧವಾರ ಹೇಳಿದರು.



ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ರಾತ್ರಿ ಪಂಪ್‌ಸೆಟ್ ಆನ್ ಮಾಡಲು ಹೋಗಿ ಕರಡಿ ದಾಳಿಗೆ ತುತ್ತಾದ ಮಹಿಳೆಯ ಫೋಟೋ ಪ್ರದರ್ಶಿಸಿದ ಅವರು, ರಾತ್ರಿ ವೇಳೆ ಕರೆಂಟ್ ಕೊಡುತ್ತಿರುವುದರಿಂದ ರೈತರು ರಾತ್ರಿ ಹೊಲಕ್ಕೆ ಹೋಗುತ್ತಿದ್ದಾರೆ. ಅಂತವರ ಮೇಲೆ ಕರಡಿ, ಚಿರತೆ ದಾಳಿ ಮಾಡುತ್ತಿವೆ. ಹಾವು ಕಚ್ಚಿ ಸಾಯುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ಆದ್ದರಿಂದ ರಾತ್ರಿ ಬದಲು ಬೆಳಿಗ್ಗೆ ಕರೆಂಟ್ ನೀಡಿ ಎಂದು ಆಗ್ರಹಿಸಿದರು. ಅನ್ನಭಾಗ್ಯ ಯೋಜನೆಯ ಅಕ್ಕಿ ಕಾಳಸಂತೆಯಲ್ಲಿ ಮಾರಾಟ ಆಗುತ್ತಿದೆ. ಇದಲ್ಲದೇ ರೈಸ್‌ಮಿಲ್ ಮಾಲೀಕರು ಛತ್ತೀಸ್‌ಘಡದಿಂದ ಕೆಜಿಗೆ 18 ರೂ.ನಂತೆ ಅಕ್ಕಿ ಖರೀದಿಸಿ ಅದನ್ನು ಅನ್ನಭಾಗ್ಯ ಯೋಜನೆಗಾಗಿ ಸರ್ಕಾರಕ್ಕೆ 24 ರೂ.ಗೆ ಮಾರಾಟ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ರಾಜ್ಯ ಆದಾಯ ಸಂಗ್ರಹಣೆಯಲ್ಲಿ ಹಿಂದೆ ಬಿದ್ದಿದೆ. ಉತ್ತರಾಖಂಡ, ಜಾರ್ಖಂಡ್ ರಾಜ್ಯಗಳಿಗಿಂತ ಕರ್ನಾಟಕ ಆರ್ಥಿಕ ಬೆಳವಣಿಗೆ ದರದಲ್ಲಿ ಹಿಂದೆ ಇದೆ. ಆದರೆ ಸರ್ಕಾರ ಮಧ್ಯಾವಧಿ ವಿತ್ತೀಯ ವರದಿಯಲ್ಲಿ ಈ ಅಂಶವನ್ನು ಮುಚ್ಚಿಟ್ಟಿದೆ. ತಪ್ಪು ಮಾಹಿತಿ ನೀಡಿದೆ ಎಂದರು.

ಒಟ್ಟು ಬಜೆಟ್‌ನ ಶೇ.16ರಷ್ಟು ಹಣವನ್ನು ಮಾತ್ರ ನೀರಾವರಿಗೆ ಮೀಸಲಿಟ್ಟಿರುವುದು ಸಾಲದು. ಇದನ್ನು ಶೇ.25 ಕ್ಕೆ ಹೆಚ್ಚಿಸಬೇಕು. ಸರ್ಕಾರ ಕಾಲಹರಣ ಮಾಡದೇ ಉತ್ತರಕರ್ನಾಟಕದ ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಬೇಕು ಎಂದು ಆಗ್ರಹಿಸಿದರು. ಕೃಷ್ಣಾ ಮೇಲ್ದಂಡೆ ಯೋಜನೆಗಳಿಗೆ 10 ಸಾವಿರ ಕೋಟಿ ಕೊಡುವುದಾಗಿ ಸರ್ಕಾರ ಹೇಳಿದೆ. ಆದರೆ ಎ ಸ್ಕೀಮ್‌ನ ಯೋಜನೆಗಳೇ ಇನ್ನೂ ಸರಿಯಾಗಿ ಬಳಕೆಯಾಗಿಲ್ಲ ಎಂದರು.